# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆ.

**ಅಧಿಸೂಚನೆ ಸಂಖ್ಯೆಃ 14 /2023, ದಿನಾಂಕಃ**

ವಿಷಯಃ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ 1. ಆಡಳಿತ ಸಹಾಯಕ/ಗುಮಾಸ್ತ 2.ಸ್ವಾಗತಕಾರರು-ವ-ಡಾಟಾ ಎಂಟ್ರಿ ಆಪರೇಟರ್ ಮತ್ತು 3. ಜವಾನ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.

ಓದಲಾಗಿದೆಃ 1) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆಃ ಕರಾಕಾಸೇಪ್ರಾಃ31/LADC-Human Resources/2023 ದಿನಾಂಕಃ 17.11.2023.

2) NALSA- Legal Aid Defencse Counsel Modified Scheme-2022.

****

ಪ್ರಸ್ತಾವನೆಃ

ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ದಾವಣಗೆರೆಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ 1. ಆಡಳಿತ ಸಹಾಯಕ/ಗುಮಾಸ್ತ 2.ಸ್ವಾಗತಕಾರರು-ವ-ಡಾಟಾ ಎಂಟ್ರಿ ಆಪರೇಟರ್ ಮತ್ತು 3. ಜವಾನ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಅಂದರೆ 6 ತಿಂಗಳು ಅಥವಾ ಮುಂದುವರೆಯಬಹುದಾದ ಅವಧಿಗೆ ಹುದ್ದೆಗಳನ್ನು ತುಂಬಿಕೊಳ್ಳಲು ಉಲ್ಲೇಖದಲ್ಲಿ ತಿಳಿಸಲಾಗಿರುತ್ತದೆ. ಅದೇ ರೀತಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ದಿ 17.11.2023 ರಲ್ಲಿ ಮೆಲ್ಕಂಡ ಹುದ್ದೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆ ವೇತನ ಮತ್ತು ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಹುದ್ದೆಯ ಕಾಲಾವಧಿ ಇತ್ಯಾದಿ ಬಗ್ಗೆ ತಿಳಿಸಲಾಗಿರುತ್ತದೆ.

1. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಆಡಳಿತ ಸಹಾಯಕ/ಗುಮಾಸ್ತ ಗುತ್ತಿಗೆ ಆಧಾರದ ಮೇಲೆ ಓದಲಾದ 1 ಮತ್ತು 2ರಲ್ಲಿ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ.ಸ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 01 | ಆಡಳಿತ ಸಹಾಯಕ/ಗುಮಾಸ್ತ | 01 | ರೂ.19000/- |

**ವಿದ್ಯಾರ್ಹತೆಃ**

- ಆಡಳಿತ ಸಹಾಯಕ/ಗುಮಾಸ್ತ ಹುದ್ದೆಗೆ ಸರ್ಕಾರದಿಂದ ಮಾನ್ಯಗೊಂಡಂತಹ ಯಾವುದೇ ವಿಶ್ವವಿದ್ಯಾನಿಲಯದಿಂದ ಪದವಿ ವಿದ್ಯಾರ್ಹತೆಯನ್ನು ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಹಾಗೂ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವಂತಹ ಸೂಕ್ತ/ಯೋಗ್ಯ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು.

2. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಸ್ವಾಗತಕಾರರು-ವ-ಡಾಟಾ ಎಂಟ್ರಿ ಆಪರೇಟರ್ ಗುತ್ತಿಗೆ ಆಧಾರದ ಮೇಲೆ ಓದಲಾದ 1 ಮತ್ತು 2ರಲ್ಲಿ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ.ಸ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 01 | .ಸ್ವಾಗತಕಾರರು-ವ-ಡಾಟಾ ಎಂಟ್ರಿ ಆಪರೇಟರ್ | 01 | ರೂ.17271/- |

**ವಿದ್ಯಾರ್ಹತೆಃ**

- ಸರ್ಕಾರದಿಂದ ಮಾನ್ಯಗೊಂಡಂತಹ ಯಾವುದೇ ವಿಶ್ವವಿದ್ಯಾನಿಲಯದಿಂದ ಪದವಿ ವಿದ್ಯಾರ್ಹತೆಯನ್ನು ಬರಹ ಮತ್ತು ವಾಕ್ಯದ ಮೂಲಕ ಸಂಭಾಷಣಾ ಸಾಮರ್ಥ್ಯವನ್ನು ಹೊಂದಿರಬೇಕು ಪೋನ್, ಫಾಕ್ಸ ಮತ್ತು ಸ್ವಿಚ್ ಬೋರ್ಡ ಇತ್ಯಾದಿ ಉಪಯೋಗಿಸಲು ಅನುಭವ ಹೊಂದಿರಬೇಕು ಹಾಗೂ ನಿಖರವಾಗಿ

ಮತ್ತು ವೇಗವಾಗಿ ಬೆರಳಚ್ಚು ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು ಕಂಪ್ಯೂಟರ್ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಹಾಗೂ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವಂತಹ ಸೂಕ್ತ/ಯೋಗ್ಯ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು.

3. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಜವಾನ ಗುತ್ತಿಗೆ ಆಧಾರದ ಮೇಲೆ ಓದಲಾದ 1 ಮತ್ತು 2ರಲ್ಲಿ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ.ಸ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 01 | ಜವಾನ | 01 | ರೂ.15202/- |

**ವಿದ್ಯಾರ್ಹತೆಃ**

- ಸರ್ಕಾರದಿಂದ ಮಾನ್ಯಗೊಂಡಂತಹ ಕನಿಷ್ಟ 10 ನೇ ತರಗತಿ ಅಥವಾ ಎಸ್ ಎಸ್ ಎಲ್ ಸಿ ಪಾಸಾಗಿರಬೇಕು ಮತ್ತು ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವಂತಹ ಸೂಕ್ತ/ಯೋಗ್ಯ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು.

**4. ಅರ್ಜಿಸಲ್ಲಿಕೆಯ ದಿನಾಂಕಃ**

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕಃ 20-11-2023
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಃ 08-12-2023

**5. ಅರ್ಜಿ ಸಲ್ಲಿಸುವ ವಿಧಾನಃ**

ಅರ್ಹ ಅಭ್ಯರ್ಥಿಗಳು ಈ ಅಧಿಸೂಚನೆಯೊಂದಿಗೆ ನೀಡಿರುವ ನಮೂನೆಯಲ್ಲಿ ತಮ್ಮ ಸಂಪೂರ್ಣ ಮಾಹಿತಿಯನ್ನು ಭರ್ತಿಮಾಡಿ ಸೂಕ್ತ ದಾಖಲೆಗಳೊಂದಿಗೆ ಹಾಗೂ ಪಾಸ್ ಪೋರ್ಟ್ ಅಳತೆಯ 2 ಇತ್ತೀಚಿನ ಭಾವಚಿತ್ರಗಳೊಂದಿಗೆ **ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಳೆ ನ್ಯಾಯಾಲಯಗಳ ಸಂಕೀರ್ಣ, ಹೈಸ್ಕೂಲ್ ಮೈದಾನದ ಹತ್ತಿರ, ದಾವಣಗೆರೆ** ಇಲ್ಲಿಗೆ ಕೊನೆಯ ದಿನಾಂಕದೊಳಗಾಗಿ ಅಂದರೆ ದಿನಾಂಕಃ 08-12-2023 ರೊಳಗಾಗಿ ಸಲ್ಲಿಸತಕ್ಕದ್ದು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

## 6. ನೇಮಕಾತಿ ವಿಧಾನ:

ಸಂದರ್ಶನ , ಕೌಶಲ್ಯ , ಕಂಪ್ಯೂಟರ್ ಮತ್ತು ಬೆರಳಚ್ಚು ನಿಖರತೆ ಮತ್ತು ನೈಪುಣ್ಯತೆ ಆಧಾರಿಸಿ ನೇರ ನೇಮಕಾತಿ

## 7. ಷರತ್ತುಗಳು:

- ಸದರಿ ಹುದ್ದೆಗೆ ಅಭ್ಯರ್ಥಿಗಳನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು ಹಾಗೂ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ನೇಮಕ ಮಾಡಿಕೊಳ್ಳಲಾಗುವುದು.

- ಸದರಿ ಹುದ್ದೆಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ನೇಮಕಗೊಂಡ ಅಭ್ಯರ್ಥಿಯು ಸದರಿ ಹುದ್ದೆಯಲ್ಲಿ ಅವರನ್ನು ಖಾಯಂ ಗೊಳಿಸುವ ಯಾವುದೇ ಹಕ್ಕನ್ನು ಪ್ರತಿಪಾದಿಸಲು ಅವಕಾಶವಿರುವುದಿಲ್ಲ.

- ಸದರಿ ಹುದ್ದೆಗೆ ನಿಗದಿಗೊಳಿಸಿರುವ ಮಾಸಿಕ ಸಂಭಾವನೆಯು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನಿರ್ದರಿಸಲ್ಪಟ್ಟಿದ್ದು, ಈ ಕುರಿತು ಸರ್ಕಾರದಿಂದ ಅಥವಾ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ಮುಂದೆ ಹೊರಡಿಸಬಹುದಾದ ಮಾರ್ಗಸೂಚಿಗಳಿಗೆ ಅನುಸಾರ ಬದಲಾವಣೆಗೆ ಒಳಪಡುವಂತಹ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

- ನೇಮಕಗೊಂಡ ಅಭ್ಯರ್ಥಿಯ ಕರ್ತವ್ಯವು ತೃಪ್ತಿಕರವಲ್ಲವೆಂದು ಕಂಡು ಬಂದಂತಹ ಸಂದರ್ಭದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ತೆಗೆದುಹಾಕಲಾಗುವುದು.

- ನೇಮಕಗೊಂಡ ಅಭ್ಯರ್ಥಿಯು ಅಗತ್ಯಬಿದ್ದರೆ ಸಾರ್ವತ್ರಿಕ ರಜಾ ದಿನಗಳಲ್ಲೂ ಸಹ ಕಚೇರಿ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

- ನೇಮಕಗೊಂಡ ಅಭ್ಯರ್ಥಿಗಳು ತಮ್ಮ ಕರ್ತವ್ಯದಲ್ಲಿ ಸದಾ ಶಿಸ್ತುಬದ್ಧರಾಗಿರತಕ್ಕದ್ದು ಹಾಗೂ ಯಾವುದೇ ದುರ್ನಡತೆ, ಅಶಿಸ್ತು ತೋರಿದರೆ ಅಥವಾ ಹಣಕಾಸು ದುರುಪಯೋಗ ಮಾಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಶಿಕ್ಷೆಗೆ ಮತ್ತು ದಂಡನೆಗೆ ಗುರಿಪಡಿಸಲಾಗುವುದು.

- ಯಾವುದೇ ಕಾರಣಗಳಿಂದ ಅಭ್ಯರ್ಥಿಗಳು ತಮ್ಮ ಹುದ್ದೆಯನ್ನು ತ್ಯಜಿಸಲು ಇಚ್ಛಿಸಿದರೆ ಆ ಕುರಿತು ಒಂದು ತಿಂಗಳ ಮುಂಚಿತವಾಗಿ ಪ್ರಾಧಿಕಾರಕ್ಕೆ ಮಾಹಿತಿ ನೀಡತಕ್ಕದ್ದು.

- ನೇಮಕಗೊಂಡ ಅಭ್ಯರ್ಥಿಗಳು ಸರ್ಕಾರ ವಿಧಿಸಿರುವ ನೀತಿ ನಿಯಮಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸತಕ್ಕದ್ದು.

- **ವಿಶೇಷ ಸೂಚನೆಃ** ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ದೂರವಾಣಿ ಅಥವಾ ಸಂದೇಶದ ಮೂಲಕ ಮಾತ್ರ ಕಳುಹಿಸಲಾಗುವುದು.

ಗೌರವಾನ್ವಿತ ಅಧ್ಯಕ್ಷರು ಜಿ.ಕಾ.ಸೇ.ಪ್ರಾ., ದಾವಣಗೆರೆ
ಇವರ ಆದೇಶದ ಮೇರೆಗೆ,
20/11/2023

ದಿನಾಂಕಃ 20-11-2023
ಸ್ಥಳಃ ದಾವಣಗೆರೆ

(ಮಹಾವೀರ ಮ.ಕರೆಣ್ಣವರ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ದಾವಣಗೆರೆ.

APPLICATION FOR THE POST OF **OFFICE ASSISTANT/CLERK, RECEPTIONIST-cum- DATA ENTRY OPERATOR, DALAYATH** in Legal Aid Defense Counsel office.

Name of the District:

**PHOTO**

| | |
|---|---|
| Name of the Applicant | |
| Name of the his/her Father/Husband | |
| Date of Birth and Age | |
| Gender | |
| Postal address | |
| Educational Qualifications | |
| Mobile No | |
| Email ID | |

Place:

Date

Signature